ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ – ೪ಎ Part – IVA	ಬೆಂಗಳೂರು, ಮಂಗಳವಾರ, ೧೪, ಜುಲೈ, ೨೦೨೬ (ಆಷಾಢ, ೨೩, ಶಕವರ್ಷ, ೧೯೪೮) BENGALURU, TUESDAY, 14, JULY, 2026 (ASHADHA, 23, SHAKAVARSHA, 1948)	ಸಂ. ೫೨೦ No. 520

ಕರ್ನಾಟಕ ಸರ್ಕಾರ

ಸಂಖ್ಯೆ: ಇಪಿ 9 ಡಿಪಿಐ 2026

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಡಾ|| ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:14.07.2026.

ಅಧಿಸೂಚನೆ-I

ಕರ್ನಾಟಕ ನಾಗರೀಕ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14) ರ ಕಲಂ-3ನೇ ಪ್ರಕರಣದ (2)ನೇ ಉಪ ಪ್ರಕರಣದ (ಎ) ಖಂಡವನ್ನು 8ನೇ ಪ್ರಕರಣದೊಡನೆ ಓದಿಕೊಂಡಂತೆ ಮತ್ತು ತನ್ಮೂಲಕ ಅಗತ್ಯಪಡಿಸಲಾದಂತೆ ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) (ತಿದ್ದುಪಡಿ) ನಿಯಮಗಳು, 2026ರ ಕರಡನ್ನು ದಿನಾಂಕ: 18.06.2026 ರಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯ ಭಾಗ – IVA (ಸಂಖ್ಯೆ: 453) ರಲ್ಲಿ ಪ್ರಕಟಿಸಿ, ಪ್ರಕಟಣೆಯ ದಿನಾಂಕದಿಂದ ಏಳು ದಿನಗಳೊಳಗಾಗಿ ಅದರಿಂದ ಭಾದಿತರಾಗುವ ಸಂಭವವಿರುವ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಲಾಗಿರುವುದರಿಂದ;

ಸದರಿ ವಿಶೇಷ ಸಂಚಿಕೆಯ ರಾಜ್ಯ ಪತ್ರವನ್ನು ದಿನಾಂಕ: 18.06.2026 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ ;

ಮತ್ತು ಸದರಿ ಕರಡು ತಿದ್ದುಪಡಿ ನಿಯಮಗಳ ಬಗ್ಗೆ ಸಾರ್ವಜನಿಕರಿಂದ ಸ್ವೀಕೃತವಾಗಿರುವ ಆಕ್ಷೇಪಣೆ ಮತ್ತು ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸಲಾಗಿದೆ.

ಈಗ ಕರ್ನಾಟಕ ನಾಗರೀಕ ಸೇವೆಗಳು ಅಧಿನಿಯಮ 1978 (1990ರ ಕರ್ನಾಟಕ ಅಧಿನಿಯಮ 14) ರ 8ನೇ ಪ್ರಕರಣದೊಂದಿಗೆ ಓದಿಕೊಂಡು 3ನೇ ಪ್ರಕರಣದ (1) ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) ನಿಯಮಗಳು, 1967ಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ರಚಿಸಿದೆ, ಎಂದರೆ:-

ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ:** (1) ಈ ನಿಯಮಗಳನ್ನು ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) (ತಿದ್ದುಪಡಿ) ನಿಯಮಗಳು, 2026 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಕರ್ನಾಟಕ ರಾಜ್ಯಪತ್ರದಲ್ಲಿ ಅಂತಿಮವಾಗಿ ಪ್ರಕಟಗೊಂಡ ದಿನಾಂಕದಿಂದ ಜಾರಿಯಾಗತಕ್ಕದ್ದು.

2. **ಕೋಷ್ಟಕದ ತಿದ್ದುಪಡಿ:** ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) ನಿಯಮಗಳು, 1967ರ (ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ),-

(1) ಕೋಷ್ಟಕದಲ್ಲಿ "ಶ್ರೇಣಿ III ಪತ್ರಾಂಕಿತವಲ್ಲದ ಹುದ್ದೆಗಳು" ಶೀರ್ಷಿಕೆಯಡಿಯಲ್ಲಿ

(ಎ) ಕ್ರಮ ಸಂಖ್ಯೆ: 37 ರಲ್ಲಿ

(ಎ) "ಪ್ರೌಢಶಾಲಾ ಸಹ ಶಿಕ್ಷಕರು ಶ್ರೇಣಿ-II" ಎಂಬ ಪದಗಳ ಬದಲಿಗೆ "ಪ್ರೌಢಶಾಲಾ ಸಹ ಶಿಕ್ಷಕರು" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು:-

(ಬಿ) ನೇಮಕಾತಿ ವಿಧಾನ ಎಂಬ ಶೀರ್ಷಿಕೆಯಡಿಯಲ್ಲಿ ಅಂಕಣ (3) ರಲ್ಲಿನ 6ನೇ ಪ್ಯಾರಾ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ಬದಲಿಗೆ ಈ ಕೆಳಕಂಡವುಗಳನ್ನು ಪ್ರತಿಸ್ಥಾಪಿಸತಕ್ಕದ್ದು. ಅಂದರೆ;-

" ಆಯ್ಕೆ ಪ್ರಾಧಿಕಾರವು ಒಟ್ಟು ಈ ಕೆಳಕಂಡವುಗಳ ಆಧಾರದ ಮೇಲೆ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸಬೇಕು:-

(i) ಅಭ್ಯರ್ಥಿಗಳು ಪದವಿ ಮತ್ತು ಬಿ.ಇಡಿ., ವಿದ್ಯಾರ್ಹತೆ ಹೊಂದಿದ್ದಲ್ಲಿ:

(ಎ) ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಅಂಕಗಳ ಶೇ.85% ರಷ್ಟು.

(ಬಿ) ಬಿ.ಎ. / ಬಿ.ಎಸ್ಸಿ. ಮತ್ತು ಇನ್ನಿತರೆ ಪದವಿಯಲ್ಲಿ ಪಡೆದ ಅಂಕಗಳ ಶೇ.13% ರಷ್ಟು.

(ಸಿ) ಬಿ.ಇಡಿ. ಪರೀಕ್ಷೆಯಲ್ಲಿ ಪಡೆದ ಅಂಕಗಳ ಶೇ.02% ರಷ್ಟು.

(ii) ಅಭ್ಯರ್ಥಿಗಳು ಬಿ.ಎ.ಇಡಿ. / ಬಿ.ಎಸ್ಸಿ.ಇಡಿ., ವಿದ್ಯಾರ್ಹತೆ ಹೊಂದಿದ್ದಲ್ಲಿ:

(ಎ) ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಅಂಕಗಳ ಶೇ.85% ರಷ್ಟು.

(ಬಿ) ಬಿ.ಎ.ಇಡಿ. / ಬಿ.ಎಸ್ಸಿ.ಇಡಿ. ಪರೀಕ್ಷೆಯಲ್ಲಿ ಪಡೆದ ಅಂಕಗಳ ಶೇ.15% ರಷ್ಟು.

(2) ಕ್ರಮ ಸಂಖ್ಯೆ 51 ರಲ್ಲಿನ "ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-I" ವರ್ಗದ ಹುದ್ದೆಯ ನಮೂದುಗಳಲ್ಲಿ,

(i) ಅಂಕಣ: 3 ರಲ್ಲಿ,

(ಎ) ನಾಲ್ಕನೇ ಪ್ಯಾರಾ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ಬದಲಿಗೆ ಈ ಕೆಳಕಂಡಂತೆ ಪ್ರತಿಸ್ಥಾಪಿಸತಕ್ಕದ್ದು:-

" ಆಯ್ಕೆ ಪ್ರಾಧಿಕಾರವು ಒಟ್ಟು ಈ ಕೆಳಕಂಡವುಗಳ ಆಧಾರದ ಮೇಲೆ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸಬೇಕು:

(ಎ) ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳ ಶೇ.85% ರಷ್ಟು.

(ಬಿ) ಪದವಿ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳ ಶೇ.13% ರಷ್ಟು.

(ಸಿ) ಬಿ.ಪಿ.ಇಡಿ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳ ಶೇ.02% ರಷ್ಟು.

(ಬಿ) ಐದನೇ ಮತ್ತು ಆರನೇ ಪ್ಯಾರಾಗಳನ್ನು ಬಿಟ್ಟು ಬಿಡಲಾಗಿದೆ.

(ii) ಅಂಕಣ: 4 ರಲ್ಲಿ "ನೇರ ನೇಮಕಾತಿ ಮತ್ತು ಮುಂಬಡ್ತಿ ಎರಡಕ್ಕೂ" ಎಂಬ ಶೀರ್ಷಿಕೆಯ ಕೆಳಗಿನ ನಮೂದುಗಳ ಬದಲಿಗೆ ಈ ಕೆಳಕಂಡ ನಮೂದುಗಳನ್ನು ಪ್ರತಿಸ್ಥಾಪಿಸತಕ್ಕದು, ಅಂದರೆ:-

"(ಎ) ದೈಹಿಕ ಶಿಕ್ಷಣವನ್ನು ಐಚ್ಛಿಕ ವಿಷಯದೊಂದಿಗೆ ಪದವಿ ಪರೀಕ್ಷೆಯಲ್ಲಿ ಶೇ.50% ರಷ್ಟು ಅಂಕಗಳು **ಅಥವಾ**

ದೈಹಿಕ ಶಿಕ್ಷಣವನ್ನು ಐಚ್ಛಿಕ ವಿಷಯದೊಂದಿಗೆ ಪದವಿ ಪರೀಕ್ಷೆಯಲ್ಲಿ ಶೇ.45% ರಷ್ಟು ಅಂಕಗಳು ಮತ್ತು ಭಾರತೀಯ ಒಲಂಪಿಕ್ ಸಂಸ್ಥೆಯ ಭಾರತೀಯ ವಿಶ್ವವಿದ್ಯಾನಿಲಯಗಳ ಸಂಘದಿಂದ ಮಾನ್ಯತೆ ಪಡೆದ ರಾಷ್ಟ್ರೀಯ ಅಥವಾ ರಾಜ್ಯ ಮಟ್ಟದ ಅಥವಾ ಅಂತರ ವಿಶ್ವವಿದ್ಯಾನಿಲಯ ಕ್ರೀಡೆ ಅಥವಾ ಆಟಗಳು ಅಥವಾ ಅಥ್ಲೆಟಿಕ್ಸ್ ನಲ್ಲಿ ಭಾಗವಹಿಸಿರುವುದು; **ಅಥವಾ**

ಪದವಿ ಪರೀಕ್ಷೆಯಲ್ಲಿನ ಶೇ.45% ರಷ್ಟು ಅಂಕಗಳು ಮತ್ತು ರಾಷ್ಟ್ರೀಯ ಅಥವಾ ರಾಜ್ಯ ಮಟ್ಟದ ಅಥವಾ ಅಂತರ ವಿಶ್ವವಿದ್ಯಾನಿಲಯ ಕ್ರೀಡೆ ಅಥವಾ ಆಟಗಳು ಅಥವಾ ಅಥ್ಲೆಟಿಕ್ಸ್ ನಲ್ಲಿ ಭಾಗವಹಿಸಿರುವುದು; **ಅಥವಾ**

ನಿಯೋಜಿತ ಸೇವಾ ನಿರತ ಅಭ್ಯರ್ಥಿಗಳಿಗೆ (ಅಂದರೆ ತರಬೇತಿ ಪಡೆದ ದೈಹಿಕ ಶಿಕ್ಷಣ ಶಿಕ್ಷಕರು / ತರಬೇತುದಾರರು) - ಪದವಿ ಪರೀಕ್ಷೆಯಲ್ಲಿನ ಶೇ.45% ರಷ್ಟು ಅಂಕಗಳು ಮತ್ತು ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿ (ಮಾನ್ಯತೆ ಮಾನದಂಡಗಳು ಮತ್ತು ಕಾರ್ಯವಿಧಾನ) ರೆಗ್ಯೂಲೇಷನ್ಸ್ 2009 ರನ್ವಯ ಕನಿಷ್ಟ 3 ವರ್ಷಗಳ ಬೋಧನ ಅನುಭವ, **ಅಥವಾ**

ದೈಹಿಕ ಶಿಕ್ಷಣ ಪದವಿಯಲ್ಲಿ ಶೇ.40 ರಷ್ಟು ಅಂಕಗಳು **ಅಥವಾ**

ದೈಹಿಕ ಶಿಕ್ಷಣವನ್ನು ಐಚ್ಛಿಕ ವಿಷಯದೊಂದಿಗೆ ಪದವಿ ಪರೀಕ್ಷೆಯಲ್ಲಿ ಶೇ.40% ರಷ್ಟು ಅಂಕಗಳು; **ಅಥವಾ**

ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿ (ಮಾನ್ಯತೆ ಮಾನದಂಡಗಳು ಮತ್ತು ಕಾರ್ಯವಿಧಾನ) ರೆಗ್ಯೂಲೇಷನ್ಸ್ 2007 (ದಿನಾಂಕ: 10.12.2007 ರಲ್ಲಿ ಪ್ರಕಟಿಸಿದ) ರನ್ವಯ ಶಾಲೆ, ಅಂತರ ಕಾಲೇಜು, ಕ್ರೀಡೆ / ಆಟಗಳು ಅಥವಾ ಎನ್.ಸಿ.ಸಿ. ಯಲ್ಲಿ 'ಸಿ' ಪ್ರಮಾಣ ಪತ್ರ ಹೊಂದಿರುವ ಪದವೀಧರ; **ಅಥವಾ**

ದೈಹಿಕ ಶಿಕ್ಷಣ ಪದವಿ ಅಂದರೆ ಬಿ.ಪಿ.ಇಡಿ (ಅಥವಾ ಅದರ ತತ್ಸಮಾನ) 3 ವರ್ಷಗಳ ಕಾಲಾವಧಿ **ಅಥವಾ**

ರಾಜ್ಯ / ವಿಶ್ವವಿದ್ಯಾನಿಲಯದ ಕ್ರೀಡೆಗಳಲ್ಲಿ / ಆಟಗಳಲ್ಲಿ / ಅಥ್ಲೆಟಿಕ್ಸ್ ನಲ್ಲಿ ಪ್ರತಿನಿಧಿಸಿದ ಪದವೀಧರ; **ಅಥವಾ**

ಅಂತರ ಕಾಲೇಜು ಕ್ರೀಡೆಗಳಲ್ಲಿ / ಆಟಗಳ ಪಂದ್ಯಾವಳಿಗಳಲ್ಲಿ 1ನೇ, 2ನೇ ಅಥವಾ 3ನೇ ಸ್ಥಾನ ಪಡೆದ / ಎನ್.ಸಿ.ಸಿ. ಯಲ್ಲಿ 'ಸಿ' ಪ್ರಮಾಣ ಪತ್ರ ಹೊಂದಿರುವ; ಅಥವಾ ಸಾಹಸ ಕ್ರೀಡೆಗಳಲ್ಲಿ ಮೂಲ ಕೋರ್ಸ್ ನಲ್ಲಿ ಉತ್ತೀರ್ಣರಾಗಿರುವ ಪದವೀಧರ; **ಅಥವಾ**

ಕ್ರೀಡಾ ವಿಜ್ಞಾನ, ಕ್ರೀಡಾ ನಿರ್ವಹಣೆ, ಕ್ರೀಡಾ ತರಬೇತಿ, ಯೋಗ, ಒಲಂಪಿಕ್ ಶಿಕ್ಷಣ, ಕ್ರೀಡಾ ಪತ್ರಿಕೋದ್ಯಮ ಇತ್ಯಾದಿಗಳಲ್ಲಿ ಒಂದು ವರ್ಷದ ತರಬೇತಿ ಪಡೆದಿರುವ ಪದವೀಧರ ಮುಂತಾದವರು (ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿ (ಮಾನ್ಯತೆಗಾಗಿ ನಿಗದಿಪಡಿಸಿರುವ ನಮೂನೆ, ಅರ್ಜಿ ಸಲ್ಲಿಸಲು ಕಾಲಮಿತಿ, ಶಿಕ್ಷಕರ ಶಿಕ್ಷಣ ಕಾರ್ಯಕ್ರಮಗಳಿಗೆ ಮಾನ್ಯತೆ ನೀಡಲು ನಿಗದಿಪಡಿಸಿರುವ ರೂಢಿಗಳು ಮತ್ತು ಮಾನದಂಡಗಳು ಮತ್ತು ಹೊಸ ಕೋರ್ಸ್ಗಳು ಅಥವಾ ತರಬೇತಿಗಳನ್ನು ಪ್ರಾರಂಭಿಸಲು ಅನುಮತಿ) ರೆಗ್ಯೂಲೇಷನ್ಸ್ 2002 ದಿನಾಂಕ: 13.11.2002 ರಂದು ಪ್ರಕಟಿಸಿರುವುದರನ್ವಯ; **ಮತ್ತು**

(ಬಿ) ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿಯಿಂದ ಮಾನ್ಯತೆ ಪಡೆದ ಯಾವುದಾದರೂ ಶಿಕ್ಷಣ ಸಂಸ್ಥೆಯಲ್ಲಿ ಕನಿಷ್ಟ 1 ವರ್ಷಗಳ ಕಾಲ ಬಿ.ಪಿ.ಇಡಿ (ಅಥವಾ ಅದರ ತತ್ಸಮಾನ).

ಮುಂಬಡ್ತಿಗೆ: ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-II ವೃಂದದಲ್ಲಿ 5 ವರ್ಷಗಳಿಗೆ ಕಡಿಮೆ ಇಲ್ಲದ ಸೇವೆಯನ್ನು ಸಲ್ಲಿಸಿರಬೇಕು.

(3) ಕ್ರಮ ಸಂಖ್ಯೆ: 67 ರಲ್ಲಿನ **ದೈಹಿಕ ಶಿಕ್ಷಣ ಶಿಕ್ಷಕರು** ಗ್ರೇಡ್-II ವರ್ಗದ ಹುದ್ದೆಗಳಿಗೆ ಸಂಬಂಧಿಸಿದಂತೆ ಇರುವ ನಮೂದುಗಳಲ್ಲಿ,

(i) ಅಂಕಣ 3 ರಲ್ಲಿ,

(ಎ) "ನೇರ ನೇಮಕಾತಿಯಿಂದ" ಎಂಬ ಪದಗಳ ಬದಲಿಗೆ "(ಎ) ಕಿವುಡು ಮತ್ತು ಅಂಧ ಮಕ್ಕಳ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿನ ಸಂಗೀತಾ ಶಿಕ್ಷಕರ ನೇರ ನೇಮಕಾತಿ, ನರ್ಸರಿ ಶಾಲಾ ಶಿಕ್ಷಕರು, ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿನ ಹಿಂದಿ ಶಿಕ್ಷಕರು" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

(ಬಿ) 6ನೇ ಪ್ಯಾರಾದ ಷರತ್ತು (ii) ರಲ್ಲಿ ಸಿ.ಪಿ.ಇಡಿ ಎಂಬ ಪದಗಳನ್ನು ಬಿಟ್ಟು ಬಿಡಲಾಗಿದೆ.

(ಸಿ) 8ನೇ ಪ್ಯಾರಾದ ನಂತರ ಈ ಕೆಳಕಂಡ ನಮೂದುಗಳನ್ನು ಸೇರ್ಪಡೆಗೊಳಿಸತಕ್ಕದ್ದು, ಅಂದರೆ:-

"(ಬಿ) ಸರ್ಕಾರಿ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-II ನೇರ ನೇಮಕಾತಿಯಿಂದ,-

ಅರ್ಜಿಗಳ ಆಹ್ವಾನ:- ಶೈಕ್ಷಣಿಕ ಜಿಲ್ಲೆಗೆ ಸಂಬಂಧಪಟ್ಟ ಉಪನಿರ್ದೇಶಕರು(ಆಡಳಿತ), ಶಾಲಾ ಶಿಕ್ಷಣ ಇಲಾಖೆ ಅಥವಾ ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ಆದೇಶದ ಮೂಲಕ ನಿಗದಿಪಡಿಸುವ ಇತರೆ ಯಾವುದೇ ಅಧಿಕಾರಿಯು (ಇನ್ನು ಮುಂದೆ ಆಯ್ಕೆ ಪ್ರಾಧಿಕಾರ ಎಂದು ಕರೆಯಲಾಗುವುದು) ಸಂಬಂಧಿಸಿದ ಶೈಕ್ಷಣಿಕ ಜಿಲ್ಲೆಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-II ವರ್ಗದ ಪ್ರತಿಯೊಂದು ಹುದ್ದೆಗಳಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳನ್ನು ಪರಿಗಣಿಸಿ ರಾಜ್ಯಪತ್ರದಲ್ಲಿ ಅಧಿಸೂಚನೆ ಪ್ರಕಟಿಸುವ ಮೂಲಕ ಮತ್ತು ಅತ್ಯಧಿಕ ಪ್ರಸಾರವುಳ್ಳ ಎರಡು ಪತ್ರಿಕೆಗಳಲ್ಲಿ ಜಾಹೀರಾತು ಹೊರಡಿಸುವ ಮೂಲಕ ಅರ್ಹ ಅಭ್ಯರ್ಥಿಗಳಿಂದ ನಿಗಧಿತ ನಮೂನೆಯಲ್ಲಿ ಮತ್ತು ಇದಕ್ಕಾಗಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಹಾಗೂ ನಿರ್ದಿಷ್ಟಪಡಿಸಿದ ಶುಲ್ಕದೊಂದಿಗೆ ಈ ನಿಯಮಗಳಡಿಯಲ್ಲಿ ನೇಮಕಾತಿಗಾಗಿ ಅರ್ಜಿಗಳನ್ನು ಸಲ್ಲಿಸುವಂತೆ ಆಹ್ವಾನಿಸತಕ್ಕದ್ದು.

ಸ್ಪರ್ಧಾತ್ಮಕ ಪರೀಕ್ಷೆ:- (1) ಆಯ್ಕೆ ಪ್ರಾಧಿಕಾರವು ರಾಜ್ಯ ಸರ್ಕಾರವು ನಿಗದಿಪಡಿಸುವ ಕಾರ್ಯ ವಿಧಾನದಂತೆ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸತಕ್ಕದ್ದು. ಆಯ್ಕೆ ಪ್ರಾಧಿಕಾರವು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಎಲ್ಲಾ ವಿವರಗಳನ್ನು ಅಂದರೆ ಪಠ್ಯ ಕ್ರಮ, ಸಮಯ, ದಿನಾಂಕ ಮತ್ತು ಸ್ಥಳ ಇತ್ಯಾದಿಗಳನ್ನು ಪ್ರಕಟಣೆಯಲ್ಲಿ ನೀಡತಕ್ಕದ್ದು.

(2) ಸ್ಪರ್ಧಾತ್ಮಕ ಪರೀಕ್ಷೆಗೆ ನಿಗದಿಪಡಿಸಿರುವ ವಿವಿಧ ಮಾಧ್ಯಮಗಳಲ್ಲಿ ರಾಜ್ಯ ಸರ್ಕಾರವು ಅಧಿಸೂಚಿಸುವಂತೆ ಹೆಚ್ಚುವರಿ ಪತ್ರಿಕೆಗಳು ಅಥವಾ ವಿಭಾಗಗಳನ್ನು ಹೊಂದಿರತಕ್ಕದ್ದು.

ಆಯ್ಕೆ ಮಾನದಂಡ:- (i) ಆಯ್ಕೆ ಪ್ರಾಧಿಕಾರವು ಅರ್ಹ ಅಭ್ಯರ್ಥಿಗಳ ಪಟ್ಟಿಯಿಂದ ಮೆರಿಟ್ ಆಧಾರದ ಮೇಲೆ ವಿವಿಧ ಮಾಧ್ಯಮಗಳಡಿಯಲ್ಲಿ ಪ್ರತ್ಯೇಕ ಅಭ್ಯರ್ಥಿಗಳ ಪಟ್ಟಿಯನ್ನು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಶೇಕಡವಾರು ಅಂಕಗಳು, ಕೋರ್ಸ್ ಮತ್ತು ಪ್ರಮಾಣ ಪತ್ರ / ದೈಹಿಕ ಶಿಕ್ಷಣ ಡಿಪ್ಲೋಮ ಕೋರ್ಸ್‌ಗಳಿಗೆ ಈ ಕೆಳಕಂಡ weightage ಹಾಗೂ ವಿಧಾನದಲ್ಲಿ ಸಿದ್ಧಪಡಿಸತಕ್ಕದ್ದು.

(ಎ) ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಅಂಕಗಳ ಶೇ.85% ರಷ್ಟು.

(ಬಿ) ಪದವಿ ಪೂರ್ವ ಪರೀಕ್ಷೆಯಲ್ಲಿ ಪಡೆದ ಅಂಕಗಳ ಶೇ.13% ಮತ್ತು

(ಸಿ) ದೈಹಿಕ ಶಿಕ್ಷಣ ಪ್ರಮಾಣ ಪತ್ರ / ಡಿಪ್ಲೋಮ ಪರೀಕ್ಷೆಯಲ್ಲಿ ಪಡೆದ ಅಂಕಗಳ ಶೇ.02% ರಷ್ಟು.

(ii) ಅಂಕಣ 4 ರಲ್ಲಿ ಕ್ರಮ ಸಂಖ್ಯೆ 4 ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳಿಗೆ ಬದಲಾಗಿ ಈ ಕೆಳಕಂಡವುಗಳನ್ನು ಪ್ರತಿಸ್ಥಾಪಿಸತಕ್ಕದ್ದು, ಅಂದರೆ:-

"ಸರ್ಕಾರಿ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿನ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-II ಗಳಿಗೆ.- (ಎ) ಮಾನ್ಯತೆ ಪಡೆದ ಮಂಡಳಿಯಿಂದ ಹಿರಿಯ ಪ್ರೌಢ ಶಿಕ್ಷಣದಲ್ಲಿ (XIIನೇ ತರಗತಿ ಅಥವಾ ಅದರ ತತ್ಸಮಾನ) ಕನಿಷ್ಟ ಶೇ.50 ರಷ್ಟು ಅಂಕಗಳು,

ಅಥವಾ

ಸೀನಿಯರ್ ಸೆಕೆಂಡರಿ (+2) ಅಥವಾ ಅದರ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾದ ಹಾಗೂ ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿ (ಮಾನ್ಯತೆ ಮಾನದಂಡಗಳು ಮತ್ತು ಕಾರ್ಯವಿಧಾನ) ರೆಗ್ಯೂಲೇಷನ್ಸ್ 2007 (ದಿನಾಂಕ: 10.12.2007 ರಲ್ಲಿ ಪ್ರಕಟಿಸಿದ) ರನ್ವಯ ನಡೆಸಲಾಗುವ ಶಾಲೆ / ಕಾಲೇಜು / ಜಿಲ್ಲಾ ಮಟ್ಟದಲ್ಲಿ ನಡೆಸಲಾಗುವ ಕ್ರೀಡೆ / ಆಟಗಳಲ್ಲಿ ಭಾಗವಹಿಸಿರುವ ಅಭ್ಯರ್ಥಿಗಳು, **ಅಥವಾ**

ಸೀನಿಯರ್ ಸೆಕೆಂಡರಿ (XIIನೇ ತರಗತಿ ಅಥವಾ ಅದರ ತತ್ಸಮಾನ) ಕನಿಷ್ಟ ಶೇ.45 ರಷ್ಟು ಅಂಕಗಳು (ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿ (ಮಾನ್ಯತೆಗಾಗಿ ನಿಗದಿಪಡಿಸಿರುವ ನಮೂನೆ, ಅರ್ಜಿ ಸಲ್ಲಿಸಲು ಕಾಲಮಿತಿ, ಶಿಕ್ಷಕರ ಶಿಕ್ಷಣ ಕಾರ್ಯಕ್ರಮಗಳಿಗೆ ಮಾನ್ಯತೆ ನೀಡಲು ನಿಗದಿಪಡಿಸಿರುವ ರೂಢಿಗಳು ಮತ್ತು ಮಾನದಂಡಗಳು ಮತ್ತು ಹೊಸ ಕೋರ್ಸ್‌ಗಳು ಅಥವಾ ತರಬೇತಿಗಳನ್ನು ಪ್ರಾರಂಭಿಸಲು ಅನುಮತಿ) ರೆಗ್ಯೂಲೇಷನ್ಸ್ 2002 ದಿನಾಂಕ: 13.11.2002 ರಂದು ಪ್ರಕಟಿಸಿರುವುದರನ್ವಯ; ಮತ್ತು

(ಬಿ) ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿಯಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಎರಡು ವರ್ಷಗಳಿಗೆ ಕಡಿಮೆ ಇಲ್ಲದ ಅವಧಿಯ ದೈಹಿಕ ಶಿಕ್ಷಣ ಪ್ರಮಾಣ ಪತ್ರ / ಡಿಪ್ಲೋಮ (ಅಥವಾ ತತ್ಸಮಾನ)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ಕೆ.ಮಮತಾ ರಾಣಿ)
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ)(ಪ್ರ),
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ.

GOVERNMENT OF KARNATAKA

No.EP 9 DPI 2026

Karnataka Government Secretariat
M.S.Building,
Dr|| B.R. Ambedkar Veedhi,
Bengaluru, Dated:14.07.2026.

NOTIFICATION - I

Whereas the draft of the Karnataka Education Department Services (Department of Public Instruction) (Recruitment) (Amendment) Rules, 2026 was published as required by clause (a) of sub-section (2) of section 3 read with Section 8 of the Karnataka State Civil Services Act, 1978 (Karnataka Act 14 of 1990) dated: 18.06.2026 in Part-IVA (No.453) of the Karnataka Gazette Extraordinary inviting objections and suggestions from all persons likely to be affected thereby within seven days from the date of its publication in the official Gazette.

Whereas the said Gazette was made available to the public on 18.06.2026.

And whereas the objections and suggestions received from the public have been considered by the Government.

Now, therefore, in exercise of the powers conferred by sub-section (1) of section 3 read with section 8 of the Karnataka State Civil Services Act, 1978 (Karnataka Act 14 of 1990), the Government of Karnataka hereby makes the following rules further to amend the Karnataka Education Department Services (Department of Public Instruction) (Recruitment) Rules, 1967, namely.

RULES

1. **Title and commencement.-** (1) These rules may be called the Karnataka Education Department Services (Department of Public Instruction) (Recruitment) (Amendment) Rules, 2026.

(2) They shall come into force from date of their final publication in the Official Gazette.

2. **Amendment of Schedule.-** In the Karnataka Education Department Services (Department of Public Instruction) (Recruitment) Rules, 1967 (hereinafter referred as the said rules),-

(1) in the schedule, under the heading 'Class III NON GAZETTED posts',-

(a) at serial no. 37,-

(a) for the words "Secondary School Assistant Masters Grade - II" the words "Secondary School Assistant Masters" shall be substituted.

(b) under the heading "Method of Recruitment" in column (3) for the sixth para and the entries relating thereto, the following shall be substituted, namely:-

"The Selection Authority shall prepare the select list on the basis of total of the following:-

(i) In case of candidates possessing Degree and B.Ed. qualifications:

(a) 85% of the Marks secured in combined Competitive Examination.

(b) 13% of the Marks secured in B.A/B.Sc & other Degree as the case may be; and

(c) 02% of the marks secured in the B.Ed examination.

(ii) In case of a candidate possessing BA.Ed/B.Sc.Ed Degree:

(a) 85% of the marks secured in the combined competitive examination

(b) 15% of the marks secured in the BA.Ed/B.Sc.Ed examination"

(2) in the entries relating to the category of post of "Physical Education Teacher Grade-I", at serial no.51,-

(i) in Column 3,-

(a) for the fourth para and the entries relating thereto, following shall be substituted, namely:-

" The Selection authority shall prepare the select list on the basis of total of the following namely:-

(a) 85% Weightage for the total marks secured in the combined competitive examination;

(b)13% Weightage for the total marks secured in Bachelor Degree; and

(c) 2% Weightage for the total marks secured in B.P.Ed examination"

(b) the fifth and the sixth para shall be omitted.

(ii) in Column 4, for the entries under the heading "both for direct recruitment and for promotion" the following shall be substituted, namely:-

"(a) Bachelor's degree with Physical Education as an elective subject with 50% marks;

or

Bachelor's degree with Physical Education as an elective subject with 45% marks and participation in National or State or Inter-University competitions in sports or games or athletics recognized by Association of Indian University of Indian Olympic Association;

or

Bachelor's degree with 45% marks and having participated in National Or State Inter-University sports or games or athletics; **or**

For deputed in-service candidates (i.e. trained Physical Education Teachers/Coaches)-Graduation with 45% marks and at least three years of teaching experience as per National Council for Teacher Education (Recognition Norms & Procedure) Regulations, 2009; **or**

Graduate in Physical Education with 40% marks; **or**

Graduate with Physical Education as an elective subject with 40% marks; **or**

Graduate who participated in school, Inter-Collegiate in sports/ games or passed NCC 'C: Certificate in accordance with National Council for Teacher Education (Recognition Norms and Procedure) Regulations, 2007 notified on 10.12.2007); **or**

Graduate in Physical Education i.e. B.P.Ed, course (or its equivalent) of three years duration; **or**

Graduate having represented State/University in sports/ games/athletics; **or**

Graduate who has secured 1st, 2nd or 3rd position in Inter-Collegiate sports/ games tournaments/ possessing NCC 'C' Certificate or passed basic course in Adventure Sports; **or**

Graduate with one year training programme in Sports Science, Sports Management, Sports Coaching, Yoga, Olympic Education, Sports Journalism etc. (in accordance with the National Council for Teacher Education (Form of application for recognition, the time limit of submission of application, determination of norms and standards for recognition of teacher

education programmes and permission to start new course or training) Regulations, 2002 notified on 13.11.2002; **and**

(b) Bachelor of Physical Education (B.P.Ed) of at least one year duration (or its equivalent) from any National council for Teacher Education recognized institution.

For Promotion: Must have put in a service of not less than five years in the cadre of Physical Education Teacher Grade – II."

(3) in the entries relating to the category of post of "Physical Education Teacher Grade-II", at serial no.67,-

(i) in Column 3,-

(a) for the words "By direct recruitment" the words, "(A) By direct recruitment of Music teachers in Primary and Senior Primary schools for Deaf and Blind, Nursery School Teachers , Hindi teachers in Primary and Senior Primary School" shall be substituted.

(b) in the sixth para, in clause (ii) the letters " C.P.Ed." shall be omitted.

(c) after the eighth para, the following shall be inserted, namely :-

"(B) By direct recruitment of Physical Education Teachers Grade-II in Government Primary and Senior Primary Schools.-

Calling of application.- The Deputy Director of Public Instruction of the respective educational district or such other officers as the State Government may by order specify in this (herein after referred to as the Selection Authority) after taking into consideration number of vacancies available in the concerned educational district for each of the categories of posts of Physical Education teachers Grade –II, shall give wide publicity by publishing the notification in the Official Gazette and also advertising in minimum two leading newspapers having wide circulation inviting eligible candidates to apply in the form and manner specified for the purpose along with such fees as may be specified therein for the purpose of recruitment under these rules.

Competitive Examination,- (1) The selection authority shall conduct a competitive examination in accordance with the procedure to be specified by the State Government. The selection authority shall provide all necessary details in respect of competitive examination such as syllabus, date, time and place, etc., in the notification.

(2) The competitive examinations for different mediums of instructions may contain additional papers or sections as may be notified by the State Government.

Selection Criteria,- (i) The selection authority shall from out of the list of eligible candidates prepare in the order of merit separate lists of candidates for posts under different mediums of instruction on the basis of derived percentages of marks secured in the

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

competitive examination, Course and Certificate/Diploma in Physical Education with following Weightages in the following manner, namely:

i. 85% percentage of marks secured in the competitive examination;
ii. 13% percentage of marks secured in PUC; and
iii. 02% percentage of marks secured in the Certificate/ Diploma in Physical Education"

(ii) in column 4, for serial no. (4) and the entries relating thereto the following shall be substituted, namely:-

"For Physical Education Teachers Grade-II in Government Primary and Senior Primary Schools ,- (a) Senior secondary (Class XII or its equivalent) with at least 50% marks from recognized board, or

Candidates who have passed the Senior secondary examination (+2) or its equivalent and have participated in sports/games at least school/college/ district level in accordance with the National Council for Teacher Education (Recognition Norms and Procedure) Regulations, 2007 notified on 10.12.2007); or

Senior Secondary (class XII or its equivalent) with at least 45% marks from recognized board (in accordance with the National Council for Teacher Education (Forms of application, for recognition, the time limit of submission of application, determination of norms and standards for recognition of teacher education programmes and permission to start new course or training) Regulations, 2002 notified on 13/11/2002; and

(b) Certificate/Diploma in Physical Education of duration not less than two years (or its equivalent) from any National Council for Teacher Education recognized institution."

By Order and in the name of the
Governor of Karnataka,

(B.K.Mamatha Rani)
Under Secretary to Government (Admin)(I/c)
Department of School Education & Literacy

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

MADESHWARA
NARASIMHA MURTHY
JAYASIMHA